## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: NRDWP ಯ ಕೇಂದ್ರ ವಲಯದಡಿ 2014-15 ರ ಅನುದಾನದ ಮೇಲೆ ಆಖರಣೆಯಾದ ಬಡ್ಡಿ ಹಣವನ್ನು **2015-16ರ** ಸಾಲಿನ ಬಹುಗ್ರಾಮ ಕುಡಿಯುವ ನೀರಿನ ಯೋಜನೆಯ (MVS) ಕಾರ್ಯಾಚರಣೆ ಮತ್ತು ನಿರ್ವಹಣೆಗಾಗಿ ಬಿಡುಗಡೆ ಮಾಡುವ ಕುರಿತು.

ಓದಲಾಗಿದೆ:
1. ಸರ್ಕಾರದ ಸುತ್ತೋಲೆ ಸಂ.ಗ್ರಾಅಪ/41/ಗ್ರಾನೀಸ(2)/2015, ದಿನಾಂಕ 6-02-2016
2. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, ಧಾರವಾಡ ಹಾಗೂ ಮಂಡ್ಯ ಇವರ ಮಸವಿ ಪತ್ರಗಳ ಕ್ರಮವಾಗಿ ದಿನಾಂಕ 3-03-2016 ಹಾಗೂ 8-03-2016

**ಪೀಠಿಕೆ:**

NRDWP ಯ ಪ್ರಸ್ತುತ SWSM – ಸಿಂಡಿಕೇಟ್ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ: 044620100915777 ಗೆ ಬ್ಯಾಂಕ್‌ನ ಮುಖ್ಯ ಖಾತೆಯಲ್ಲಿ 2014-15ನೇ ಸಾಲಿನಲ್ಲಿ ಕೇಂದ್ರದ ಪಾಲಿನ ಅನುದಾನದ ಮೇಲೆ ಒಟ್ಟು ರೂ.772.00 ಲಕ್ಷಗಳ ಬಡ್ಡಿ ಹಣವು ಆಖರಣೆಯಾಗಿರುತ್ತದೆ. ಪ್ರಸ್ತುತ ಉಲ್ಲೇಖ (2) ರ ಪತ್ರಗಳನ್ವಯ ಬಹುಗ್ರಾಮ ಕುಡಿಯುವ ನೀರು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಸಲುವಾಗಿ ಧಾರವಾಡ ವಿಭಾಗದಿಂದ ರೂ.80.00 ಲಕ್ಷ ಹಾಗೂ ಮಂಡ್ಯ ವಿಭಾಗದಿಂದ ರೂ.100.00 ಲಕ್ಷಗಳ ಅನುದಾನ ಬೇಡಿಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ SWSM – ಸಿಂಡಿಕೇಟ್ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ: 044620100915777 ಗೆ ಬ್ಯಾಂಕ್‌ನ ಮುಖ್ಯ ಖಾತೆಯಲ್ಲಿ ಲಭ್ಯವಿರುವ ಬಡ್ಡಿ ಹಣದಲ್ಲಿ ಧಾರವಾಡ ವಿಭಾಗಕ್ಕೆ ರೂ.80.00 ಲಕ್ಷ ಹಾಗೂ ಮಂಡ್ಯ ವಿಭಾಗಕ್ಕೆ ರೂ.100.00 ಲಕ್ಷಗಳ ಒಟ್ಟು ರೂ.180.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ನಿರ್ಣಯಿಸಲಾಗಿದೆ. ಆದ್ದರಿಂದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/41/ಗ್ರಾನೀಸ(2)/2015, ಬೆಂಗಳೂರು, ದಿನಾಂಕ 16-03-2016**

ಪೀಠಿಕೆಯಲ್ಲಿನ ವಾಸ್ತವಾಂಶಗಳ ಹಿನ್ನೆಲೆಯಲ್ಲಿ 2015-16ರ ಸಾಲಿನಲ್ಲಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ (NRDWP) ಯೋಜನೆಯಡಿ ಬಹುಗ್ರಾಮ ಕುಡಿಯುವ ನೀರು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆ (O&M) ಅಂಶದಡಿ SWSM – ಸಿಂಡಿಕೇಟ್ ಬ್ಯಾಂಕ್ ಉಳಿತಾಯ ಖಾತೆ ಸಂಖ್ಯೆ: 044620100915777 ಗೆ ಬ್ಯಾಂಕ್‌ನ ಮುಖ್ಯ ಖಾತೆಯಲ್ಲಿ ಲಭ್ಯವಿರುವ ಬಡ್ಡಿ ಹಣದಲ್ಲಿ ಧಾರವಾಡ ವಿಭಾಗಕ್ಕೆ ರೂ.80.00 ಲಕ್ಷಗಳು ಹಾಗೂ ಮಂಡ್ಯ ವಿಭಾಗಕ್ಕೆ ರೂ.100.00 ಲಕ್ಷಗಳು ಒಟ್ಟು ರೂ.180.00 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

2. ಈ ಆದೇಶದಲ್ಲಿ ಬಿಡುಗಡೆಯಾದ ಅನುದಾನವನ್ನು RTGS ಮುಖೇನ ಈಗಾಗಲೇ ಗೊತ್ತುಪಡಿಸಿರುವ SWSM ಬ್ಯಾಂಕ್ ಮೂಲ ಉಳಿತಾಯ ಖಾತೆ ಸಂಖ್ಯೆ: 04462010091577 ಮುಖಾಂತರ ವಿನಿಯೋಗಿಸತಕ್ಕದ್ದು.

3. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗುತ್ತಿರುವ ಅನುದಾನವನ್ನು ಕರ್ನಾಟಕ ಪಾರದರ್ಶಕ ಕಾಯ್ದೆ-1999 ಮತ್ತು ಕರ್ನಾಟಕ ಪಾರದರ್ಶಕ ನಿಯಮಗಳು-2000, ಕರ್ನಾಟಕ ಆರ್ಥಿಕ ಸಂಹಿತೆ-1958 ಹಾಗೂ ಚಾಲ್ತಿ ಇರುವ ಇಲಾಖಾ ಇತರೆ ನಿಯಮಗಳು / ಕಾಯ್ದೆಗಳನ್ವಯ ಖರ್ಚು ಭರಿಸತಕ್ಕದ್ದು.

4. ರಾಜ್ಯ ಮಟ್ಟದಲ್ಲಿರುವ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ SWSM ನ ಮೂಲ ಉಳಿತಾಯ ಖಾತೆ ಸಂಖ್ಯೆ: 04462010091577 ಯಿಂದ ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಲೆಕ್ಕಾಧಿಕಾರಿಗಳ ಮೇಲುರುಜುವಿನೊಂದಿಗೆ ಆಯಾ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಮೇಲೆ ವಿವರಿಸಲಾದ ಘಟಕಗಳಡಿ ಕಳುಹಿಸುವ ಬಿಲ್ಲುಗಳನ್ನು ಈ ಆದೇಶದಲ್ಲಿ ಸಂಬಂಧಿಸಿದ ಜಿಲ್ಲಾವಾರು ಬಿಡುಗಡೆ ಮಾಡಿರುವ ಅನುದಾನದ ಮಿತಿಯೊಳಗೆ ಮಾನ್ಯ ಮಾಡಲು ಸಿಂಡಿಕೇಟ್ ಬ್ಯಾಂಕ್ – ರಾಜ್ಯ ಮಟ್ಟದಲ್ಲಿ ಕ್ರಮವಹಿಸತಕ್ಕದ್ದು. ಹಾಗೂ ಇಲಾಖಾ ಪಂಚತಂತ್ರದ ತಂತ್ರಾಂಶದಲ್ಲಿ (ಗಾಂಧಿ ಸಾಕ್ಷಿ ಕಾಯಕಲ್ಪ) ಹಾಗೂ IMIS ನಲ್ಲಿ ವೆಚ್ಚ ದಾಖಲಿಸಬೇಕು. ಇದನ್ನು ಜಿಲ್ಲಾ ಪಂಚಾಯತಿಗಳ ಮುಖ್ಯ ಲೆಕ್ಕಾಧಿಕಾರಿಗಳು ಪರಿವೀಕ್ಷಿಸಿ ದೃಢೀಕರಿಸಬೇಕು.

5. ಬ್ಯಾಂಕ್‌ಗೆ ಕಳುಹಿಸುವ ಆರ್.ಟಿ.ಜಿ.ಎಸ್. ನಮೂನೆಯಲ್ಲಿ **MVS (O&M)** ಎಂದು ನಮೂದಿಸತಕ್ಕದ್ದು ಹಾಗೂ ಮೇಲ್ಕಂಡ ಅನುದಾನವನ್ನು ಈಗಾಗಲೇ ಅನುಮೋದನೆಯಾಗಿ ಕ್ರಿಯಾ ಯೋಜನೆಯಡಿ ಸೇರ್ಪಡಿಸಲ್ಪಟ್ಟಿರುವ ಪೂರ್ಣಗೊಂಡಿರುವ ಬಹು ಗ್ರಾಮ ನೀರು ಸರಬರಾಜು ಯೋಜನೆಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯ ಬಿಲ್ಲುಗಳ ಪಾವತಿಗಾಗಿ ಮಾತ್ರ ವಿನಿಯೋಗಿಸತಕ್ಕದ್ದು.

ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ

6. ಮುಖ್ಯ ಲೆಕ್ಕಾಧಿಕಾರಿಗಳು, ಗ್ರಾ.ಕು.ನೀ.&.ನೈ. ಇಲಾಖೆ ಪ್ರಸ್ತುತ ಬಿಡುಗಡೆ ಮಾಡುತ್ತಿರುವ ಅನುದಾನವನ್ನು IMIS ನಲ್ಲಿ ಇಂದೀಕರಿಸತಕ್ಕದ್ದು. ಹಾಗೂ ಆಯಾಯ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು ಸಂಬಂಧಪಟ್ಟ ಕಾಮಗಾರಿಗಳ ಅನುಷ್ಠಾನದ ಭೌತಿಕ ಹಾಗೂ ಆರ್ಥಿಕ ಪ್ರಗತಿಯನ್ನು IMIS ನಲ್ಲಿ ಇಂದೀಕರಿಸಿ ದಾಖಲಿಸತಕ್ಕದ್ದು.

7. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಯಾವುದೇ ಕಾರಣದಲ್ಲೂ ಇತರೆ ಘಟಕದಡಿ ವರ್ಗಾಯಿಸಿ ಉಪಯೋಗಿಸಿಕೊಳ್ಳದಂತೆ ಹಾಗೂ ಅನುದಾನವನ್ನು 31ನೇ ಮಾರ್ಚ್ 2016 ರೊಳಗೆ ಖರ್ಚು ಭರಿಸಲು ಕ್ರಮ ವಹಿಸತಕ್ಕದ್ದು. ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ಮಾಡಿ ವರದಿ ಮಾಡತಕ್ಕದ್ದು.

8. ಈ ಆದೇಶದಲ್ಲಿ ಬಿಡುಗಡೆ ಮಾಡಲಾದ ಅನುದಾನವನ್ನು ಉಲ್ಲೇಖ (2) ರ ಸುತ್ತೋಲೆಯಲ್ಲಿ ತಿಳಿಸಲಾಗಿರುವಂತೆ ಕ್ರಮ ವಹಿಸತಕ್ಕದ್ದು. ಹಾಗೂ ಕಾಮಗಾರಿಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನು ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮೇಲುಸ್ತುವಾರಿ ಮಾಡಿ ಕಾಲಕಾಲಕ್ಕೆ ವರದಿ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ. ಕೃಷ್ಣಪ್ಪ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾ.ನೀ.ಸ.) (ಪ್ರ)
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ.

**ಪ್ರತಿಗಳು:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಎಯು-1) ಕರ್ನಾಟಕ, ಬೆಂಗಳೂರು.
3. ಮಹಾಲೇಖಪಾಲರು (ಎಯು-2) ಕರ್ನಾಟಕ, ಬೆಂಗಳೂರು.
4. ಉಪ ಮಹಾಲೇಖಪಾಲರು, ಮಹಾಲೇಖಪಾಲರು (ಎಯು-1) ರವರ ಶಾಖಾ ಕಛೇರಿ, ಕಾಲೇಜು ರಸ್ತೆ, ಧಾರವಾಡ.
5. ಮುಖ್ಯ ಇಂಜಿನಿಯರ್, ಗ್ರಾ.ಕು.ನೀ.&.ನೈ. ಇಲಾಖೆ, 1ನೇ ಮಹಡಿ, ಕೆ.ಹೆಚ್.ಬಿ. ಕಟ್ಟಡ, ಕಾವೇರಿಭವನ, ಬೆಂಗಳೂರು.
6. ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಧಾರವಾಡ / ಮಂಡ್ಯ ಜಿಲ್ಲೆಗಳು
7. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ / ಮಂಡ್ಯ ಜಿಲ್ಲೆಗಳು ಇವರಿಗೆ ಆದೇಶದಲ್ಲಿನ ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸಲು ಸೂಚಿಸಿದೆ.
8. ಅಧೀಕ್ಷಕ ಅಭಿಯಂತರರು, ಗ್ರಾ.ಕು.ನೀ.&.ನೈ. ವೃತ್ತ, ಬೆಳಗಾಂ / ಮೈಸೂರು ವೃತ್ತ ಕಛೇರಿಗಳು.
9. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
11. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
12. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
13. ವಿಶೇಷಾಧಿಕಾರಿ (ಜಿಪಂ) ಹಾಗೂ ಸರ್ಕಾರದ ಪದನಿಮಿತ್ತ ಉಪಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
14. ಸರ್ಕಾರದ ಅಧೀನ ಕಾರ್ಯದರ್ಶಿ, ವೆಚ್ಚ (6) (ಜಿಪಂ) ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
15. ಮುಖ್ಯ ಲೆಕ್ಕಾಧಿಕಾರಿಗಳು, RDW&SD ಕೇಂದ್ರ ಕಛೇರಿ, ಬೆಂಗಳೂರು ಇವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
16. ಮುಖ್ಯ ಲೆಕ್ಕಾಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ / ಮಂಡ್ಯ ಜಿಲ್ಲೆಗಳು ಇವರಿಗೆ ಆದೇಶದಲ್ಲಿನ ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸಲು ಸೂಚಿಸಿದೆ.
17. ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ.&.ನೈ. ವಿಭಾಗ, ಧಾರವಾಡ / ಮಂಡ್ಯ ಜಿಲ್ಲೆಗಳ ವಿಭಾಗ ಕಛೇರಿಗಳು ಇವರಿಗೆ ಆದೇಶದಲ್ಲಿನ ನಿಬಂಧನೆಗಳನ್ನು ಚಾಚೂ ತಪ್ಪದೆ ಪಾಲಿಸಲು ಸೂಚಿಸಿದೆ.
18. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ (ಪಂ.ರಾಜ್), ಗ್ರಾ.ಅ.&.ಪಂ. ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು.
19. ಆಯುಕ್ತರು, RDW&SD ಮತ್ತು ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ ಇವರ ಆಪ್ತ ಸಹಾಯಕರಿಗೆ.
20. ಮ್ಯಾನೇಜರ್, ಸಿಂಡಿಕೇಟ್ ಬ್ಯಾಂಕ್, BWSSB ಶಾಖೆ, ರಾಜಧೂತ್ ಕಾಂಪ್ಲೆಕ್ಸ್, ಅವೆನ್ಯೂ ರಸ್ತೆ, ಬೆಂಗಳೂರು.
21. ಆಂತರಿಕ ಆರ್ಥಿಕ ಸಲಹೆಗಾರರು, RDPR ಇಲಾಖೆ ಇವರ ಆಪ್ತ ಸಹಾಯಕರು.
22. ಮುಖ್ಯ ಸಂಪಾದಕರು ಮತ್ತು ಸಂಪರ್ಕಾಧಿಕಾರಿ "ಕರ್ನಾಟಕ ವಿಕಾಸ" ಗ್ರಾ.ಅ.ಪಂ.ರಾಜ್ ಇಲಾಖೆ, ಬೆಂಗಳೂರು.
23. ಶಾಖಾಧಿಕಾರಿ, ರವಾನೆ ಮತ್ತು ಸ್ವೀಕೃತಿ ಶಾಖೆ, ಗ್ರಾ.ಅ.&.ಪಂ.ರಾಜ್ ಇಲಾಖೆ (ವಾರದ ಗೆಜೆಟ್‌ನಲ್ಲಿ ಪ್ರಕಟಿಸಲು 5 ಪ್ರತಿಗಳು).
24. ರಾಜ್ಯ ಪತ್ರಾಗಾರ ಇಲಾಖೆ (ಬಿಡಿ ಪ್ರತಿ ಶಾಖೆ).
25. ಗ್ರಾಅಪಂ.ರಾಜ್ ಇಲಾಖೆಯ ಮಾಹಿತಿ ಕೇಂದ್ರ (10 ಪ್ರತಿಗಳು).
26. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.